16 ಹೆಕ್ಟೇರು ಮಳೆ ಆಶ್ರಯದ ಮೇವು ಬೆಳೆಯುವ ಭೂಮಿ ಮತ್ತು 57 ಹೆಕ್ಟೇರು ನೈಸರ್ಗಿಕ ಅರಣ್ಯ ಪ್ರದೇಶ ಸೇರಿದೆ.

ಇ) ಪ್ರಸ್ತುತ ಇಂಥಹ ಪ್ರಸ್ತಾವನೆ ಇರುವುದಿಲ್ಲ.

ಬಾಗೇಪಲ್ಲಿ ತಾಲ್ಲೂಕಿನಿಂದ ಹಜ್ ಯಾತ್ರಿಗಳ ಬಗ್ಗೆ

642(810) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕುನಾದ್ಯಂತ ಕಳೆದ ಸಾಲಿನಲ್ಲಿ ಹೆಜ್ ಯಾತ್ರೆಗೆ ಸರ್ಕಾರವು ಆಯ್ಕೆ ಮಾಡಿ ಕಳುಹಿಸಿದ ಮುಸ್ಲಿಂಬಾಂಧವರ ಫಲಾನುಭವಿಗಳ ಸಂಖ್ಯೆ ಎಷ್ಟು? ವಿವರ ಒದಗಿಸುವುದು.

ಆ) ಈ ಹಜ್ ಯಾತ್ರೆಗೆ ಸರ್ಕಾರವು ಪ್ರತಿಯೊಬ್ಬ ಮುಸ್ಲಿಂ ಬಾಂಧವರಿಗೆ ಖರ್ಚು ಮಾಡಲಾದ ವೆಚ್ಚವೆಷ್ಟು? ವಿವರ ಒದಗಿಸುವುದು.

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) 2001-2002ನೇ ಸಾಲಿನ ಹಜ್ ಯಾತ್ರೆಗೆ ಬಾಗೇಪಲ್ಲಿ ತಾಲ್ಲೂಕಿನಿಂದ ಯಾವುದೇ ವ್ಯಕ್ತಿಯನ್ನು ಹಜ್ ಯಾತ್ರೆಗೆ ಆಯ್ಕೆ ಮಾಡಿರುವುದಿಲ್ಲ. ಸರ್ಕಾರವು ಹಜ್‌ಗಾಗಿ ಜನರಿಂದ ಯಾರನ್ನು ಆಯ್ಕೆ ಮಾಡುವುದಿಲ್ಲ. ಮುಸ್ಲಿಂ ತಾವಾಗಿಯೇ ಈ ಯಾತ್ರೆಯನ್ನು ಕೈಗೊಳ್ಳುವರು.

ಆ) ರಾಜ್ಯ ಸರ್ಕಾರವು ಹಜ್ ಯಾತ್ರೆಗೆ ಕೈಗೊಳ್ಳಲು ಯಾವುದೇ ಹಜ್ ಯಾತ್ರಿಕರಿಗೆ ಧನಸಹಾಯ ನೀಡುತ್ತಿಲ್ಲ.

ಬಾಗೇಪಲ್ಲಿಯಲ್ಲಿ ಮುಸ್ಲಿಂ ಮಸೀದಿ ಮತ್ತು ರುದ್ರಭೂಮಿಗಳ ವ್ಯವಸ್ಥೆ

643(811) ಶ್ರೀ ಸಂಪಂಗಿ ಎನ್. ಎಂ.ಎಲ್.ಎ (ಬಾಗೇಪಲ್ಲಿ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಮುಸ್ಲಿಂ ಭಾಂದವರ ಮಸೀದಿ ಹಾಗೂ ರುದ್ರಭೂಮಿಗಳ ಸಂಖ್ಯೆ ಎಷ್ಟು? (ವಿವರ ಒದಗಿಸುವುದು)

ಆ) ಈ ಮುಸ್ಲಿಂ ಭಾಂದವರ ಮಸೀದಿ ಹಾಗೂ ರುದ್ರಭೂಮಿಗಳ ರಕ್ಷಣೆಗೆ ಸರ್ಕಾರವು ಇದುವರೆಗೂ ಬಿಡುಗಡೆ ಮಾಡಿದ ಒಟ್ಟು ಮೊತ್ತ ಎಷ್ಟು? ವಿವರ ಒದಗಿಸುವುದು.

ಇ) ಬಾಗೇಪಲ್ಲಿ ತಾಲ್ಲೂಕಿನಲ್ಲಿ ಅವ್ಯವಸ್ಥೆಯ ಸ್ಥಿತಿಯಲ್ಲಿರುವ ಮಸೀದಿ ಹಾಗೂ ರುದ್ರಭೂಮಿಯ ಸಂಖ್ಯೆಗಳು ಎಷ್ಟು ಇವುಗಳ ವ್ಯವಸ್ಥೆಗೆ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನಲ್ಲಿ 17 ಮಸೀದಿಗಳು ಮತ್ತು 48 ಖಬರಸ್ತಾನಗಳಿವೆ.